**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 23/2025**

**ಪಿಡಬ್ಲ್ಯೂ.05**

**ದಿನಾಂಕ: 24.12.2025** **ಸಿಡಬ್ಲ್ಯೂ.06**

| | |
|---|---|
| ಹೆಸರು | ಶ್ರೀಜಾ |
| ತಂದೆ ಹೆಸರು | ಶ್ರೀಕಾಂತ |
| ವಯಸ್ಸು | 10 ವರ್ಷ |
| ಉದ್ಯೋಗ | 4 ನೇ ತರಗತಿ |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆ:** ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಈ ದಿನ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ. 1 ಬಸ್ ನಮ್ಮ ಕಾರಿಗೆ ಡಿಕ್ಕಿ ಪಡಿಸಿದ ವಿಚಾರಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ. ಚಾಸಾ.1 ನನ್ನ ಅಣ್ಣ. ಚಾಸಾ.4 ನನ್ನ ತಾಯಿ. ಚಾಸಾ.5 ನನ್ನ ಅಕ್ಕ. ಚಾಸಾ.8 ನನ್ನ ತಂದೆ. ಹೋದ ವರ್ಷ ನಾನು, ನನ್ನ ಅಣ್ಣ ಚಾಸಾ.1, ನನ್ನ ತಾಯಿ ಚಾಸಾ.5, ಚಾಸಾ.6 ನನ್ನ ಅಕ್ಕ ದೇವಸ್ಥಾನಳಿಗೆ ಹೋಗಿ ಬೆಂಗಳೂರಿಗೆ ಹೋಗುತ್ತಿರುವಾಗ ಹರಗನಹಳ್ಳಿ ಬ್ರಿಡ್ಜ ಹತ್ತಿರ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ವೇಗವಾಗಿ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿತು. ನಮ್ಮ ಕಾರು ಒಂದು ಹಂಪ್ಸನ್ನು ನಿಧಾನಕ್ಕೆ ಹತ್ತಿ ಇಳಿಸುತ್ತಿರುವಾಗ ಒಂದು ಬಸ್ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಯಿತು. ಅಪಘಾತದಿಂದ ಚಾಸಾ.5 ರವರಿಗೆ ಪ್ರಜ್ಞೆ ಇರಲಿಲ್ಲ. ನನ್ನ ತಾಯಿಗೆ ಕಾಲು ಮತ್ತು ತಲೆಗೆ ಪೆಟ್ಟು ಬಿದ್ದಿತ್ತು. ನನ್ನ ಅಣ್ಣನಿಗೆ ತಲೆಗೆ ಪೆಟ್ಟು ಬಿದ್ದಿತ್ತು. ನನಗೆ 2 ಕಾಲುಗಳಿಗೆ ಪೆಟ್ಟು ಬಿದ್ದಿತ್ತು. ನಂತರ ನಮ್ಮನ್ನು ಅಂಬುಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಪಡಿಸಿದ ಬಸ್ ಚಾಲಕನನ್ನು ನೋಡಿದ್ದೇನೆ. ಅವರು ಈಗ ನ್ಯಾಯಾಲಯದಲ್ಲಿ ಇದ್ದಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ ಎಸ್ ಪಿ ವಕೀಲರಿಂದ:**

ನಮ್ಮ ಕಾರು 60 ರ ವೇಗದಲ್ಲಿ ಹೋಗುತ್ತಿತ್ತು ಎಂದರೆ ಸರಿ. ಅದೇ ವೇಗದಲ್ಲಿ ನಮ್ಮ ಕಾರು ಮುಂದೆ ಇನ್ನೊಂದು ಕಾರು ಹೋಗುತ್ತಿತ್ತು ಎಂದರೆ ಸರಿ. ರಸ್ತೆಯಲ್ಲಿ ತಗ್ಗು ಇತ್ತು ಎಂದರೆ ಸರಿ. ಸದರಿ ತಗ್ಗನ್ನು ತಪ್ಪಿಸಲು ನಮ್ಮ ಮುಂದೆ ಇದ್ದ ಕಾರು ಮತ್ತು ನಮ್ಮ ಕಾರಿನ ಚಾಲಕ ಬಲಬಾಗಕ್ಕೆ ಬಂದು ಮುಂದೆ ಹೋಗಿರುತ್ತದೆ ಎಂದರೆ ಸರಿ. ನೀವು ಯಾವುದೇ ಇಂಡಿಕೇಟರ್ ಹಾಕದೇ ಬಲಬಾಗಕ್ಕೆ ತಿರುಗಿರುತ್ತೀರಿ ಎಂದರೆ ಸಾಕ್ಷಿಯು ನಾನು ಮಲಗಿದ್ದೆ ಎಂದು ನುಡಿಯುತ್ತಾರೆ. ನಾನು ಮಲಗಿದ್ದರಿಂದ

ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಆರೋಪಿತನನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ.1 ಮತ್ತು 4 ರವರ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ